## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.

**ಸಿಸಿ.ಸಂ.1089/2025**

ಪಿರ್ಯಾದುದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

**ವಿರುದ್ಧ**

ಆರೋಪಿಗಳು : ಲೋಕೇಶ,
ಬಿನ್ ನಂಜುಂಡಪ್ಪ,
ವಯಸ್ಸು 46 ವರ್ಷ,
ವಾಸಃ ಪೇಟೆ ಬೀದಿ,
ಪಿರಿಯಾಪಟ್ಟಣ ಟೌನ್,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ ಯೋಗೇಶ.ಎಂ.ಆರ್., ಬಿ.ಎ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ., ಪಿರಿಯಾಪಟ್ಟಣ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆಃ-

**ಮೊದಲನೇಯದಾಗಿ,** ದಿನಾಂಕ 31.01.2025 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿನ ತಾತನಹಳ್ಳಿ ಗ್ರಾಮದ ಸರ್ವೇ ನಂ.40 ರ ಜಮೀನಿನ ಪಕ್ಕದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಹೈವೆ ರಸ್ತೆ ಬದಿಯಲ್ಲಿ ಚಾಸಾ.1 ರಾಮಚಂದ್ರ ರವರು ಇದ್ದಾಗ, ಆರೋಪಿಯಾದ ನೀವು ಅಲ್ಲಿಗೆ ಹೋಗಿ, ಚಾಸಾ.1 ರಾಮಚಂದ್ರ ರವರನ್ನು ಉದ್ದೇಶಿಸಿ, ಈ ಜಮೀನು ನಮಗೆ ಸೇರಬೇಕು ಎಂದು ಜಗಳ ಮಾಡಿದ್ದು, ಆಗ ಚಾಸಾ.1 ರಾಮಚಂದ್ರ ರವರು ಈ ಜಮೀನಿನಲ್ಲಿ ತಾನು

ಅನುಬೋಗದಲ್ಲಿದ್ದೇನೆ, ನ್ಯಾಯಾಲಯದಲ್ಲಿ ಈ ಜಮೀನನ್ನು ನಿಮಗೆ ಬಿಟ್ಟುಕೊಡುವಂತೆ ಆದೇಶವಾದರೆ ಬಿಟ್ಟುಕೊಡುತ್ತೇನೆ ಅಲ್ಲಿಯವರೆಗೆ ತಾನೇಕೆ ಜಮೀನನ್ನು ಬಿಟ್ಟು ಕೊಡಲಿ ಎಂದು ಹೇಳಿದಾಗ, ಆರೋಪಿಯಾದ ನೀವು ಚಾಸಾ.1 ರಾಮಚಂದ್ರು ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಬೋಳಿ ಮಗನೇ ನಮ್ಮ ಜಮೀನನ್ನು ನಮಗೆ ಬಿಟ್ಟುಕೊಡಲು ನಿನಗೆ ಕೋರ್ಟ್ ಆರ್ಡರ್ ಬೇಕಾ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.352 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಎರಡನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ಚಾಸಾ.1 ರಾಮಚಂದ್ರು ರವರನ್ನು ಮುಂದೆ ಹೋಗದಂತೆ ತಬ್ಬಿಹಿಡಿದುಕೊಂಡು, ಅಡ್ಡಗಟ್ಟಿ ನಿಲ್ಲಿಸಿಕೊಂಡು ಅಕ್ರಮ ತಡೆವುಂಟು ಮಾಡಿ, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.126(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಮೂರನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ನಿಮ್ಮ ಕೈಗಳಿಂದ ಚಾಸಾ.1 ರಾಮಚಂದ್ರು ರವರ ಮೈಕೈಗೆ ಹೊಡೆದು, ಕೆಳಗೆ ಬೀಳಿಸಿ ನಿಮ್ಮ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**ಕೊನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಚಾಸಾ.1 ರಾಮಚಂದ್ರ ರವರಿಗೆ ಈ ಜಮೀನನ್ನು ಬಿಟ್ಟುಕೊಡದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆಂದು ಪ್ರಾಣಾ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2)ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ:
ಪಿರಿಯಾಪಟ್ಟಣ.

**( ಯೋಗೇಶ.ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.